ಅಂತ ಬ್ರಹ್ಮಚಾರಿಯಾಗಿಯೇ ಇದ್ಬಿಟ್ಟಿದ್ದಾನೆ ಅವ್ನು...' ಪೂನಂಳ ಅಣ್ಣ ಸಮಾಧಾನದ ಮಾತುಗಳನ್ನಾಡಿದ್ದರು. ತಳಮಳದಿಂದ ಸಂಜೆ ತೆವಳತೊಡಗಿರುವ ಹೊತ್ತಿನಲ್ಲೇ ಡಾ.ಶರತ್ಚಂದ್ರರ ಕಾರು ಹೊರಗಿನಿಂದ ಹಾರ್ನ್ ಮಾಡಿತ್ತು.

ನಾವೆಲ್ಲರೂ ಕಾತುರದಿಂದ ಅವರನ್ನು ನಿರೀಕ್ಷಿಸಿದೆವು. ಶರತ್ಚಂದ್ರರ ಜೊತೆ ಬಂದ ನಿನಾದನ ಮುಖದಲ್ಲಿ ಈಗ ಉದ್ವಿಗ್ನತೆಯಿರದೆ ಪ್ರಶಾಂತತೆಯಿತ್ತು.

'ಅಮ್ಮ, ಸಾರಿ, ನಾನು ನಿಮ್ಗೆಲ್ಲಾ ಗಾಬರಿ ಮಾಡಿಸ್ಬಿಟ್ಟೆ, ಇನ್ಮೇಲೆ ಹೀಗೆಲ್ಲಾ ಮಾಡಲ್ಲ....' ಎಂದವನು ನನ್ನನ್ನು ತಬ್ಬಿಕೊಂಡು ಮುತ್ತಿಕ್ಕಿದಾಗ ಇದು ಕನಸೋ ನನಸೋ ಎಂದು ತಿಳಿಯಲಿಲ್ಲ ನನಗೆ. ಉಳಿದ ಎಲ್ಲರ ಅವಸ್ಥೆಯೂ ಇದೇ ಆಗಿತ್ತು.

'ಏನಾಗಿತ್ತು ಡಾಕ್ಟರ್ ನನ್ನ ಮೊಮ್ಮಗನಿಗೆ, ಅವ್ನಿಗೆ ದೆವ್ವ ಹಿಡಿದಿದೆ ಅಂತ್ಲೇ ನಾನು ತಿಳಿದಿದ್ದೆ...' ತಗ್ಗಿದ ಧ್ವನಿಯಲ್ಲಿ ಮಾತನಾಡಿದ್ದಳು ಅಮ್ಮ.

'ಹೌದು ತಾಯಿ, ನೀವು ಹೇಳ್ತಿರೋದು ಸರಿಯಾಗಿಯೇ ಇದೆ, ನಿಮ್ಮ ಮೊಮ್ಮಗಂಗೆ ದೆವ್ವ ಹಿಡಿದಿದ್ದಂತೂ ಹೌದು...' ನಗುತ್ತಾ ಹೇಳಿದರು.

ಶರತ್ಚಂದ್ರರ ಮಾತಿನಿಂದ ನಾವೆಲ್ಲರೂ ಚಕಿತರಾಗಿ ಅವರತ್ತ ನೋಡಿದೆವು. ಅವರು ನನ್ನತ್ತ ತಿರುಗಿದರು.

'ಹೌದು ನೇತ್ರ, ನಿಮ್ಮ ಮಗಂಗೆ ಹಿಡಿದಿದ್ದು 'ಬ್ಲೂ ವೇಲ್' ಎನ್ನುವ ಭಯಾನಕ ದೆವ್ವ...!'

ಅವರೆಂದಾಗ ಅರ್ಥವಾಗದೆ ಗೊಂದಲದಿಂದ ಅವರತ್ತ ನೋಡಿದೆ.

'ಎಲ್ಲವನ್ನೂ ನೇರವಾಗಿ ಹೇಳಿಬಿಡ್ತೀನಿ. ನೀವು ಸಿಂಗಲ್ ಪೇರೆಂಟಾಗಿ ನಿಮ್ಮ ಮಗನನ್ನು ನೋಡಿಕೊಳ್ತಿದೀರಿ, ಅವನಿಗ್ಯಾವ ಕೊರತೆಯೂ ಬರಬಾರದೆಂದು ಅವನು ಕೇಳಿದ್ದೆಲ್ಲಾ ಕೊಡಿಸ್ತೀರಿ, ಅವ್ನು ಮೊಬೈಲ್ ಕೇಳ್ದ, ನೀವು ತೆಗೆದು ಕೊಟ್ರಿ, ಬಿಡುವಿದ್ದಾಗ ವೀಡಿಯೊ ಗೇಮ್ಸ್‌ಗಳನ್ನು ಆಡುತ್ತಾ ನಿಮ್ಮ ಮಗ ಕಾಲ ಕಳೆಯತೊಡಗಿದ್ದ. ನೀವೆಲ್ಲಾ ಅವ್ನ ಕಡೆ ಹೆಚ್ಚು ಗಮನ ಕೊಟ್ಟಿರಲಿಕ್ಕಿಲ್ಲ. ವೀಡಿಯೊ ಗೇಮ್ಸ್‌ಗಳು ನಿಜವಾಗಿಯೂ ಬೆಳೆಯುವ ಮಕ್ಕಳಿಗೆ ಒಳ್ಳೆಯದಲ್ಲ. ಅದರಲ್ಲೂ 'ಬ್ಲೂ ವೇಲ್' ನಂತಹ ಕೆಲವು ಡೆಡ್ಲಿ ಗೇಮ್ಸ್‌ಗಳಿರುತ್ತವೆ. ಅವನ್ನು ಪ್ರೋಗ್ರಾಮಿಂಗ್ ಮಾಡೋರು ವಿಕೃತ ಮನಸ್ಸಿನವ್ರೇ ಆಗಿರ್ತಾರೆ. ಈ 'ಬ್ಲೂ ವೇಲ್' ವೀಡಿಯೊ ಗೇಮನ್ನೇ ಉದಾಹರಣೆಯಾಗಿ ತೆಗೆದುಕೊಂಡ್ರೆ ಇದನ್ನು ಪ್ರೋಗ್ರಾಮಿಂಗ್ ಮಾಡಿದ್ದು ರಷ್ಯಾದ ಒಬ್ಬ ವಿಕೃತ ಮನಸ್ಸಿನ ಮನಃಶಾಸ್ತ್ರದ ವಿದ್ಯಾರ್ಥಿ. ತನ್ನ ವಿಕೃತ ವರ್ತನೆಗಾಗಿ ವಿಶ್ವವಿದ್ಯಾನಿಲಯದಿಂದ ಉಚ್ಛಾಟಿತನಾಗಿದ್ದ ಆತನ ಹೆಸರು ಫಿಲಿಪ್ ಬುಡೇಯ್ಕಿನ್. ಇದು 50 ದಿನಗಳ ಆಟ. ಈ ಆಟದಲ್ಲಿ ಅನೇಕ ಅಪಾಯಕಾರಿ ಟಾಸ್ಕ್ ಕೊಟ್ಟು ಕೊನೆಯ ದಿನ ಆಟಗಾರನನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರಚೋದಿಸಲಾಗುತ್ತೆ. ಈಗಾಗ್ಲೇ ದೇಶ ವಿದೇಶಗಳಲ್ಲಿ ಹೆಚ್ಚಾಗಿ ಮಕ್ಳೇ ಈ ಡೆಡ್ಲಿ ಗೇಮಿಗೆ ಬಲಿಯಾಗಿದ್ದಾರೆ. ನಿಮ್ಮ ಮಗ ತನಗೆ ಗೊತ್ತಿಲ್ದೇ ಈ ಗೇಮಿಗೆ ಎಂಟ್ರಿ ಕೊಟ್ಟಿದ್ದಾನೆ.

## ಮೊಬೈಲ್

ಬಗ್ಗಲು
ಕಲಿಸುತ್ತದೆ,
ಬದುಕಲು
ಕಲಿಸುವುದಿಲ್ಲ!

**– ಬಾಲು ಪಟಗಾರ**




ಕಳೆದೊಂದು ತಿಂಗಳಿನಿಂದ ಅಪಾಯಕಾರಿ ಟಾಸ್ಕ್‌ಗಳನ್ನು ಮಾಡಿಕೊಂಡೇ ಬಂದಿದ್ದಾನೆ. ನೀವು ಗಮನಿಸಿರಲಿಕ್ಕಿಲ್ಲ. ಅವನ ಮೈಮೇಲೆ ಬಹಳಷ್ಟು ಗಾಯಗಳಾಗಿವೆ. ತಿಮಿಂಗಿಲದ ಆಕಾರದಲ್ಲಿ ತನ್ನ ಮೈಯ್ಯಲ್ಲಿ ಗಾಯ ಮಾಡಿಕೊಂಡಿದ್ದಾನೆ. ಸ್ಮಶಾನದಲ್ಲಿ ಕೂರುವುದು, ಮೈ ಗಾಯ ಮಾಡಿಕೊಳ್ಳುವುದು, ಭಯಾನಕ ವೀಡಿಯೊಗಳನ್ನು ವೀಕ್ಷಿಸುವುದು ಎಲ್ಲವೂ ಆ ಗೇಮಿನ ಭಾಗವೇ. ನಿನ್ನೆ ಆ ಡೆಡ್ಲಿ ಗೇಮಿನ ಕೊನೆಯ ದಿನ. ಅದಕ್ಕೇ ನಿಮ್ಮ ಮಗ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದು..' ಎಂದು ಹೇಳಿ ಮತ್ತೆ ಮುಂದುವರಿಸಿದರು.

'ಇದು ನಿಮ್ಮ ಮಗನೊಬ್ಬನ ಸಮಸ್ಯೆ ಮಾತ್ರವೇ ಅಲ್ಲ ನೇತ್ರ, ಮಾದಕ ವಸ್ತುವಿನ ಚಟದಂತೆ ಇದು ಯುವಜನರನ್ನೂ, ಮಕ್ಕಳನ್ನೂ ಸೆಳೆಯುತ್ತಿದೆ. ಕೌಟುಂಬಿಕ ಹಿನ್ನೆಲೆ ಸರಿಯಿಲ್ಲದ, ಸೋಲುಗಳನ್ನೇ ಕಾಣುವ, ಯಾರೊಂದಿಗೂ ಹೆಚ್ಚು ಬೆರೆಯದ ಅಂತರ್ಮುಖಿಗಳನ್ನೇ ಈ ಆಟ ಆರಿಸುಕೊಳ್ಳುತ್ತದೆ. ಒಮ್ಮೆ ಈ ಆಟಕ್ಕೆ ತಮಗೆ ತಿಳಿಯದಂತೆ ಸೇರಿಬಿಟ್ಟರೆ ಸಾಕು, ಮತ್ತೆ ಹೊರಗಿನ ಪ್ರಪಂಚಕ್ಕೆ ಹಿಂದಿರುಗಲಾರದಂತೆ ಅದು ಆವರಿಸಿಕೊಂಡು ಬಿಡುತ್ತದೆ...ಏನೋ ನಿಮ್ಮ ಪುಣ್ಯ, ನಿಮ್ಮ ಮಗ ನಿಮಗೆ ತಿರುಗಿ ಸಿಕ್ಕಿದ್ದಾನೆ...' ಶರತ್ಚಂದ್ರ ಎಂದಾಗ ಎಲ್ಲರೂ ಬೆಚ್ಚಿದ್ದೆವು. ಏನೋ ಮಗ ಮೊಬೈಲಿನಲ್ಲಿ ತನ್ನ ಪಾಡಿಗೆ ವೀಡಿಯೊ ಗೇಮ್‌ಗಳನ್ನು ಆಡುತ್ತಿದ್ದಾನೆಂದು ಸುಮ್ಮನೆ ಬಿಟ್ಟಿದ್ದೇ ತಪ್ಪಾಗಿ ಹೋಗಿತ್ತು.

'ಈ ಡೆಡ್ಲಿ ಗೇಮ್ಸ್‌ಗಳಿಗೆ ಆಯಾ ದೇಶಗಳು ಕಾನೂನನ್ನು ಮಾಡ್ತಿವೆ ಅಂತ ಕೇಳಿದ್ದೀನಿ. ಆದ್ರೆ ನಮ್ಮ ಮಕ್ಕಳ ಬಗ್ಗೆ ನಮಗೆ ಜಾಗ್ರತೆ ಇರದಿದ್ರೆ ಆ ಯಾವ ಕಾನೂನುಗಳೂ ಪ್ರಯೋಜನಕ್ಕೆ ಬರಲ್ಲ...'

ಪೂನಂಳ ಅಣ್ಣನೂ ಶರತ್ಚಂದ್ರರ ಮಾತುಗಳಿಗೆ ದನಿಗೂಡಿಸಿದ್ದರು.

'ನಿಮ್ಮೊಂದಿಗೆ ಪರ್ಸನಲ್ಲಾಗಿ ಮಾತಾಡ್ಬೇಕಿತ್ತು ನೇತ್ರ, ಪಕ್ಕದಲ್ಲೇ ಒಂದು ಪಾರ್ಕಿದೆ. ಬನ್ನಿ, ಹಾಗೇ ಒಂದು ರೌಂಡ್ ಹೋಗ್ಬರೋಣ..'

ಹೊರಡುವ ಮುಂಚೆ ಶರತ್ಚಂದ್ರ ಆಹ್ವಾನಿಸಿದಾಗ ಹುಬ್ಬೇರಿಸಿ ಅವರತ್ತ ನೋಡಿದೆ. ನನ್ನೊಂದಿಗೆ ಮಾತನಾಡುವ ವಿಷಯ ಏನಿರಬಹುದೆಂದು ಅರ್ಥವಾಗಲಿಲ್ಲ. ಏನಾದರಾಗಲೆಂದು ಅವರೊಂದಿಗೆ ಹೊರಟೆ. ಆಶ್ಚರ್ಯವೆಂಬಂತೆ ಮಗ ಸಂತೋಷದಿಂದ ನಮ್ಮಿಬ್ಬರಿಗೆ ಕೈ ಬೀಸಿದ್ದ.

ಪಕ್ಕದಲ್ಲೇ ಇದ್ದ ಉದ್ಯಾನವನ ಸೊಗಸಾಗಿತ್ತು. ಅಸ್ತಮಿಸುತ್ತಿದ್ದ ಸೂರ್ಯನ ಹೊಂಗಿರಣಗಳು ಅಲ್ಲಿನ ಹಸಿರಲ್ಲಿ ಚಿನ್ನಾಟವಾಡುತ್ತಿದ್ದವು. ಅಲ್ಲಲ್ಲಿ ಹಾಕಿದ್ದ ಕಲ್ಲಿನ ಬೆಂಚುಗಳಲ್ಲಿ ಪ್ರೇಮ ಪಕ್ಷಿಗಳು ಕಲರವವೆಬ್ಬಿಸುತ್ತಿದ್ದವು. ತಂಗಾಳಿ ಮೈಯ್ಯನ್ನು ಮೃದುವಾಗಿ ಸೋಕಿತು.

ನಾವು ಒಂದೆಡೆ ಕುಳಿತೆವು. ಶರತ್ಚಂದ್ರ ಆಡುವ ಮಾತುಗಳಿಗಾಗಿ ಕಾತುರದಿಂದ ಕಾದೆ.

'ನಿಮ್ಮ ಮಗನನ್ನು ನನ್ನ ಕ್ಲಿನಿಕ್ಕಿಗೂ ಕರ್ಕೊಂಡು ಹೋಗಿದ್ದೆ ನೇತ್ರ. ನನ್ನ ಜೊತೆ ಅವ್ನು ಮನಸ್ಸು ಬಿಚ್ಚಿ ಮಾತಾಡ್ದ. ನೀವು ಲೈಫ್‌ನಲ್ಲಿ ತುಂಬಾ ನೊಂದಿದ್ದೀರಿ. ಸಿಂಗಲ್ ಪೇರೆಂಟಾಗಿ ಮಗನನ್ನು ಬೆಳೆಸಿದ್ದೀರಿ. ಆದ್ರೆ ಅಪ್ಪನಿಲ್ಲದ ಕೊರತೆ ಚಿಕ್ಕಂದಿನಿಂದ್ಲೂ ನಿಮ್ಮ ಮಗನನ್ನು ಬಹಳಷ್ಟು ಕಾಡಿದೆ. ಅವ್ನೇನು ಹೇಳ್ದ ಗೊತ್ತಾ? ಅಂಕಲ್, ನೀವೇ ನನ್ನ ಡ್ಯಾಡಿಯಾಗಿ ಬಂದ್ಬಿಡಿ, ನೀವಂದ್ರೆ ನನಗಿಷ್ಟ' ಅಂದ. ನಾನೂ ಯೋಚ್ನೆ ಮಾಡ್ದೆ. ನನ್ನ ವೃತ್ತಿಯ ಕಾರಣಕ್ಕೆ ನಾನು ಇಷ್ಟು ವರ್ಷ ಮದುವೆಯಾಗ್ಲಿಲ್ಲ. ನಿಮ್ಮ ಮಗನ ಮುದ್ದಾದ ಮಾತುಗಳನ್ನು ಕೇಳಿದ್ಮೇಲೆ ಚಂದದ ಸಂಸಾರವಿದ್ರೆ ಲೈಫ್ ಎಷ್ಟು ಅರ್ಥಪೂರ್ಣವಾಗಿರುತ್ತೆ ಅಂತ ಅನ್ನೋಕೆ ಶುರುವಾಗಿದೆ, ನಿನಾದನಿಗೆ ಅಪ್ಪನಾಗಿ, ನಿಮ್ಗೆ ಸಂಗಾತಿಯಾಗಿ ಇರಬೇಕು ಅಂತ ಅನ್ನಿಸ್ತಿದೆ, ಹೇಳಿ ನೇತ್ರ, ನನ್ನ ಮದ್ವೆಯಾಗ್ತೀರಾ?..'

ಶರತ್ಚಂದ್ರ ನೇರವಾಗಿ ಮಾತನಾಡಿ ನನ್ನ ಕಂಗಳಲ್ಲಿ ದೃಷ್ಟಿ ನೆಟ್ಟಾಗ ನನ್ನಲ್ಲಿ ಹೇಳಲಾರದ ಹೊಸ ಭಾವ. ಅವರ ಅರಳು ಕಂಗಳಲ್ಲಿ ಪ್ರೀತಿಯ ಬೆಳದಿಂಗಳು ಹರಡಿಕೊಂಡಿತ್ತು. ಆ ಬೆಳದಿಂಗಳಿನ ತಂಪಿನಲ್ಲಿ ನಾನು ನನ್ನ ಮಗ ನಿಶ್ಚಿಂತವಾಗಿರಬಹುದೆನ್ನಿಸಿ ಮೌನವಾಗಿ ಅವರ ಭುಜಕ್ಕೊರಗಿದೆ. ಅ ಮೌನ ಸಾವಿರ ಮಾತಾಡಿತು.

'ಆಟವೊ, ಹುಡಗಾಟವೋ..' ಒಟ್ಟಿನಲ್ಲಿ ಸಾವಿನ ಆಟವನ್ನು ಆಡಿ ಕೊನೆಗೂ ಜೀವನದ ಹಾದಿಗೆ ಹಿಂದಿರುಗಿದ್ದ ಮಗನನ್ನು ನೆನೆದು ಹೃದಯ ಸಂಭ್ರಮಿಸಿತು. ಮೊದಲ ಬಾರಿಗೆ ಒಂದು ಮಾಸದ ಮುಗುಳ್ನಗು ನನ್ನ ಮುಖದಲ್ಲಿ ಮೂಡಿದ್ದರೆ, ಸೂರ್ಯ ಹೊಂಬಣ್ಣದಿಂದ ಹೊಳೆಯುತ್ತಾ ಭುವಿಗೆ ಹೊಂಗಿರಣಗಳ ಜರಿಸೀರೆಯನ್ನು ಉಡಿಸತೊಡಗಿದ್ದ.